ಲೈಂಗಿಕ ದೌರ್ಜನ್ಯ ಆರೋಪ: ಪ್ರಯಾಣಿಕನ ವಿರುದ್ಧ ದೂರು

ಬೆಂಗಳೂರು: ಉದ್ದೇಶಪೂರ್ವಕವಾಗಿ ಪ್ರಯಾಣಿಕರೊಬ್ಬರು ಅಸಭ್ಯ ವರ್ತನೆ ತೋರಿ, ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಆರೋಪಿಸಿ ಇಂಡಿಗೊ ಏರ್ ಲೈನ್ಸ್‌ನ ಮಹಿಳಾ ಸಿಬ್ಬಂದಿಯೊಬ್ಬರು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಕೇರಳ ಮೂಲದ 40 ವರ್ಷದ ಸಿಜಿನ್ ಎಂಬ ಪ್ರಯಾಣಿಕನ ವಿರುದ್ಧ ದೂರು ದಾಖಲಾಗಿದೆ. ಈ ಘಟನೆ ಮೇ 22ರಂದು ಬೆಳಗಿನ ಜಾವ ನಡೆದಿದೆ. ವಿಮಾನ ಕೊಚ್ಚಿನ್‌ನಿಂದ ಬೆಂಗಳೂರು ಮಾರ್ಗದ ಮೂಲಕ ಭೋಪಾಲ್ ಕಡೆಗೆ ಹೊರಟಿತ್ತು. ವಿಮಾನದ ಸೀಟ್ ನಂಬರ್ 38ರಲ್ಲಿ ಕುಳಿತಿದ್ದ ಸಿಜಿನ್ ಎಂಬ ಪ್ರಯಾಣಿಕ ಗೋವಾಕ್ಕೆ ಪ್ರಯಾಣಿಸಬೇಕಿತ್ತು. ಆತ ಮಹಿಳಾ ಸಿಬ್ಬಂದಿ ಬಳಿ ಬಂದು ವಿಮಾನ ಬದಲಾಯಿಸುವ ಕುರಿತು ಮಾಹಿತಿ ಕೇಳಿದ್ದರು. ಅದಕ್ಕೆ ಆ ಸಿಬ್ಬಂದಿ, ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಳಿದು ಗೋವಾಕ್ಕೆ ಬೇರೆ ವಿಮಾನದಲ್ಲಿ ಹೋಗಬೇಕೆಂದು ತಿಳಿಸಿದ್ದರು. ಮಹಿಳಾ ಸಿಬ್ಬಂದಿ ಸೀಟ್ ಬಳಿ ನಿಂತಿದ್ದ ವೇಳೆ ಸಿಜಿನ್ ಆಕೆಯ ಹಿಂಬದಿಗೆ ಬಂದು ಅಸಭ್ಯ ವರ್ತನೆ ತೋರಿದ್ದಾರೆ. ಈ ಬಗ್ಗೆ ಪ್ರಶ್ನಿಸಿದಾಗ ಉತ್ತರ ನೀಡದೆ ಸುಮ್ಮನಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಸಿಜಿನ್ ವಿರುದ್ಧ ಆಕೆ ದೂರು ದಾಖಲಿಸಿದ್ದಾರೆ ಎಂದು ತಿಳಿದುಬಂದಿದೆ.

ಪಿಂಚಣಿ ಮೊತ್ತ ಪರಿಷ್ಕರಣೆಗೆ ಒತ್ತಾಯಿಸಿ ಪ್ರತಿಭಟನೆ

ಬೆಂಗಳೂರು: ಪಿಂಚಣಿ ಮೊತ್ತ ಪರಿಷ್ಕರಣೆ ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ನಿವೃತ್ತ ಬ್ಯಾಂಕ್ ಅಧಿಕಾರಿಗಳು ಗುರುವಾರ ಪ್ರತಿಭಟನೆ ನಡೆಸಿದರು. ಸ್ವಾತಂತ್ರ್ಯ ಉದ್ಯಾನದಲ್ಲಿ ಜಮಾಯಿಸಿದ ಹೋರಾಟಗಾರರು, ಬ್ಯಾಂಕ್ ಉದ್ಯೋಗಿಗಳ ಪಿಂಚಣಿ ನಿಯಮಗಳು 1995 ಹಾಗೂ 35ರ ನಿಬಂಧನೆಯಂತೆ ಪಿಂಚಣಿ ಮೊತ್ತ ಪರಿಷ್ಕರಣೆ ಮಾಡದೆ ಅನ್ಯಾಯ ಮಾಡುತ್ತಿರುವ ಕೇಂದ್ರ ಹಣಕಾಸು ಸಚಿವಾಲಯದ ಧೋರಣೆಯನ್ನು ಖಂಡಿಸಿದರು. ಅಖಿಲ ಭಾರತ ಬ್ಯಾಂಕ್ ಪಿಂಚಣಿದಾರರು ಮತ್ತು ನಿವೃತ್ತರ ಒಕ್ಕೂಟ ಅಧ್ಯಕ್ಷ ಕೆ.ವಿ.ಆಚಾರ್ಯ ಮಾತನಾಡಿ, ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಬೇಡಿಕೆಗಳನ್ನು ಈಡೇರಿಸುವುದಾಗಿ ಭರವಸೆ ನೀಡಿದ್ದರು. ಆದರೆ, ಭೇಟಿಗೆ ಅವಕಾಶ ಕೊಡುತ್ತಿಲ್ಲ. 1993-95 ವರ್ಷಗಳ ಅವಧಿಯಲ್ಲಿ ಬ್ಯಾಂಕ್‌ಗಳಲ್ಲಿ ಪಿಂಚಣಿ ವ್ಯವಸ್ಥೆ ಜಾರಿಯಾದ ನಂತರ ಸೇವೆ ಸಲ್ಲಿಸುತ್ತಿರುವ ನೌಕರರ ವೇತನ, ಭತ್ಯೆಗಳನ್ನು ನಿಯತವಾಗಿ 5 ವರ್ಷಗಳಿಗೊಮ್ಮೆ ಪರಿಷ್ಕರಿಸಬೇಕು. ಆದರೆ, ಸರಕಾರ ನಿರ್ಲಕ್ಷ್ಯ ವಹಿಸಿದ್ದು, 90ರ ದಶಕದಲ್ಲಿ ನಿವೃತ್ತರಾದ ಮುಖ್ಯ ಜನರಲ್ ಮ್ಯಾನೇಜರ್‌ಗೆ, ಬ್ಯಾಂಕ್‌ನಿಂದ ಇದೀಗ ನಿವೃತ್ತರಾಗಿರುವ ಅಟೆಂಡರ್‌ನ ಪಿಂಚಣಿಗಿಂತ ಕಡಿಮೆ ಮೊತ್ತ ದೊರೆಯುತ್ತಿದೆ. ಇದರಿಂದ ಅನ್ಯಾಯವಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇನ್ನೂ ಬಾರದ ವೇತನ: ಆಶಾ ಕಾರ್ಯಕರ್ತೆಯರ ಪ್ರತಿಭಟನೆ

ಬೆಂಗಳೂರು: ತಮಗೆ 3-4 ತಿಂಗಳಿನಿಂದ ಸಂಬಳ ನೀಡದ ಹಿನ್ನೆಲೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರದ ವಿರುದ್ಧ ಆಶಾ ಕಾರ್ಯಕರ್ತೆಯರು ಪ್ರತಿಭಟನೆ ನಡೆಸಿದ್ದಾರೆ.

ರಾಜ್ಯದಲ್ಲಿ ಒಟ್ಟು 42 ಸಾವಿರ ಆಶಾ ಕಾರ್ಯಕರ್ತೆಯರಿದ್ದು, ಬಿರುಬಿಸಿಲು, ಕೊರೆವ ಚಳಿಯಲ್ಲಿ ದುಡಿಯುತ್ತಾರೆ. ಆದರೆ ಸುಮಾರು 3-4 ತಿಂಗಳಿಂದ ಸಂಬಳವಿಲ್ಲದೆ ಪರದಾಡುವಂತಾಗಿದೆ. ರಾಜ್ಯ ಸರಕಾರ ಕೊಡುವ ಗೌರವಧನ ಮತ್ತು ಕೇಂದ್ರ ಸರಕಾರ ಕೊಡುವ ಪ್ರೋತ್ಸಾಹಧನ ಬದುಕಿಗೆ ಆಧಾರವಾಗಿದ್ದು, ಈಗ ಅದಕ್ಕೂ ಕೊಳ್ಳಿ ಇಡುತ್ತಿರುವುದು ಎಷ್ಟು ಸರಿ ಎಂದು ಪ್ರಶ್ನಿಸಿದ ಪ್ರತಿಭಟನಾಕಾರರು, ನ್ಯಾಯ ಒದಗಿಸುವಂತೆ ನೂತನ ಸರಕಾರವನ್ನು ಆಗ್ರಹಿಸಿದರು.

ನೂತನ ಸರಕಾರದ ಮುಂದೆ ಆಶಾ ಕಾರ್ಯಕರ್ತೆಯರು ಅಹವಾಲು ತೋಡಿಕೊಂಡಿದ್ದು, ಸಿಎಂ, ಡಿಸಿಎಂಗೆ ಮನವಿ ಮಾಡಿದ್ದಾರೆ. ಅಂಗನವಾಡಿ ಕಾರ್ಯಕರ್ತೆಯರಿಗೆ ಮಾಸಿಕ 15 ಸಾವಿರ ರು., ಆಶಾ ಕಾರ್ಯಕರ್ತೆಯರಿಗೆ 8 ಸಾವಿರ ರು. ಮತ್ತು ಬಿಸಿಯೂಟ ನೌಕರರಿಗೆ 5 ಸಾವಿರ ರು. ವೇತನ ನೀಡುವುದಾಗಿ ಬೆಳಗಾವಿಯಲ್ಲಿ ಇತ್ತೀಚೆಗೆ ಕ್ರಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಘೋಷಿಸಿದ್ದರು. ಇದು ಕಾಂಗ್ರೆಸ್ 6ನೇ ಗ್ಯಾರಂಟಿ ಕೂಡ ಆಗಿದೆ. ಅದನ್ನು ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ಅತ್ಯಾಚಾರದ ಆರೋಪಿಗೆ 20 ವರ್ಷ ಜೈಲುಶಿಕ್ಷೆ

ಬೆಂಗಳೂರು: ಅಪ್ರಾಪ್ತ ಬಾಲಕಿಯ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಿದ್ದ ಪ್ರಕರಣ ಸಂಬಂಧ ಆರೋಪಿಗೆ 20 ವರ್ಷ ಜೈಲುಶಿಕ್ಷೆ ವಿಧಿಸಿ ನಗರದ ಎಫ್‌ಟಿಎಸ್‌ಸಿ-1 ನ್ಯಾಯಾಲಯ ತೀರ್ಪು ಪ್ರಕಟಿಸಿದೆ.

ಜತೆಗೆ, ಮೃತಳ ಕುಟುಂಬಕ್ಕೆ 9 ಲಕ್ಷ ರು. ಪರಿಹಾರ ನೀಡುವಂತೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಸೂಚನೆ ನೀಡಿದೆ. ಅತ್ಯಾಚಾರ ಮತ್ತು ಕೊಲೆ ಮಾಡಿದ್ದಕ್ಕಾಗಿ ಅಪರಾಧಿ ರಾಜು ಸಿ. ಎಂಬಾತನಿಗೆ ಪೋಕ್ಸೋ ಕಾಯಿದೆಯಡಿ ಈ ಶಿಕ್ಷೆ ವಿಧಿಸಿ ನ್ಯಾಯಾಧೀಶರಾದ ಕೆ.ಎನ್.ರೂಪಾ ಈ ತೀರ್ಪು ನೀಡಿದ್ದಾರೆ. ಬೆಂಗಳೂರಿನ ಸೋಮಸಂದ್ರಪಾಳ್ಯದ ರಾಜು.ಸಿ ಎಂಬಾತ ಸಾಮಾಜಿಕ ಜಾಲತಾಣದ ಮೂಲಕ ಬಾಲಕಿಯೊಂದಿಗೆ ಗೆಳೆತನ ಬೆಳೆಸಿ ಆಕೆಯನ್ನು 2021ರ ಏಪ್ರಿಲ್ 3ರಂದು ಬಂಡೇಪಾಳ್ಯ ಠಾಣಾ ವ್ಯಾಪ್ತಿಯ ನಿರ್ದಿಷ್ಟ ಸ್ಥಳಕ್ಕೆ ಕರೆಸಿಕೊಂಡು ದೈಹಿಕ ಸಂಪರ್ಕ ಬೆಳೆಸಿ ಕೊಲೆ ಮಾಡಿದ್ದ. ವಿಚಾರಣೆ ವೇಳೆ ಈ ಆರೋಪ ಸಾಬೀತಾಗಿದ್ದು, ಅದರಂತೆ ಪೊಲೀಸರು ಆರೋಪಪಟ್ಟಿ ಸಲ್ಲಿಸಿದ್ದರು. ಕೋರ್ಟ್‌ನಲ್ಲಿ ಅಭಿಯೋಜನೆ ಪರವಾಗಿ ಎಸ್‌ಪಿಪಿ ಪಿ.ಕೃಷ್ಣವೇಣಿ ವಾದ ಮಂಡಿಸಿದ್ದರು.

ಸಮಾಚಾರ ಸಣ್ಣದಲ್ಲ

ಅನೈತಿಕ ಸಂಬಂಧ: ವ್ಯಕ್ತಿಯ ಹತ್ಯೆ

ಬೆಂಗಳೂರು: ವಿವಾಹಿತೆ ಜತೆ ಅನೈತಿಕ ಸಂಬಂಧ ಹೊಂದಿದ್ದ ವ್ಯಕ್ತಿಯೊಬ್ಬನನ್ನು ಬರ್ಬರವಾಗಿ ಹತ್ಯೆ ಮಾಡಿರುವ ಪ್ರಕರಣ ದೇವನಹಳ್ಳಿ ತಾಲೂಕಿನ ಸೀಂಗ್ರಹಳ್ಳಿ ಗ್ರಾಮದಲ್ಲಿ ನಡೆದಿದೆ. ಪ್ರದೀಪ್ ಹತ್ಯೆಯಾದವನು. ಗ್ರಾಮದ ವಿವಾಹಿತೆ ಜತೆಗೆ ಪ್ರದೀಪ್ ಅನೈತಿಕ ಸಂಬಂಧ ಹೊಂದಿದ್ದ. ಹೀಗಾಗಿ ಈ ವಿಚಾರವಾಗಿ ಮಾತುಕತೆ ನಡೆಸಲೆಂದು ಆತನನ್ನು ಕರೆಸಿದ ಮಹಿಳೆಯ ಪತಿ ವೆಂಕಟೇಶ್ ಮತ್ತು ಕೋಳಿ ನಾಗೇಶ್ ಎಂಬುವರು ಹತ್ಯೆ ಮಾಡಿದ್ದಾರೆ ಎಂದು ತಿಳಿದುಬಂದಿದೆ. ವಿವಾಹಿತೆ ಜತೆಗೆ ಪ್ರದೀಪ್ ಅನೈತಿಕ ಸಂಬಂಧ ಹೊಂದಿದ್ದ ಬಗ್ಗೆ ಈ ಹಿಂದೆಯೂ ಗಲಾಟೆಯಾಗಿದ್ದು, ಪೊಲೀಸ್ ಠಾಣೆಯಲ್ಲಿ ರಾಜಿ ಪಂಚಾಯತಿ ಮಾಡಿದ್ದರು. ಆದರೂ ಪ್ರದೀಪ್ ಸಂಬಂಧ ಮುಂದುವರಿಸಿದ್ದ. ಈ ಹಿನ್ನೆಲೆಯಲ್ಲಿ ಬುಧವಾರ ರಾತ್ರಿ ಖಾಸಗಿ ಬಡಾವಣೆಯಲ್ಲಿ ಪ್ರದೀಪ್‌ನನ್ನು ಮಾತನಾಡಲು ಕರೆಸಿಕೊಂಡು ಹಲ್ಲೆ ನಡೆಸಲಾಗಿದೆ. ಈ ವೇಳೆ ತಪ್ಪಿಸಿಕೊಂಡ ಪ್ರದೀಪ್ ಒಂದು ಕಿ.ಮೀ. ವರೆಗೆ ಓಡಿ ಬಂದಿದ್ದರೂ ಅಟ್ಟಾಡಿಸಿಕೊಂಡು ಬಂದ ವೆಂಕಟೇಶ್ ಮತ್ತು ಕೋಳಿ ನಾಗೇಶ್ ಆತನನ್ನು ಹಿಡಿದು ಕಟ್ಟಿಹಾಕಿ ಹಲ್ಲೆಗೈದು ಕೊಲೆ ಮಾಡಿದ್ದಾರೆ. ಈ ಸಂಬಂಧ ವಿಶ್ವನಾಥಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಹೇ ಚೈಲ್ಡ್' ಎಂದಿದ್ದಕ್ಕೆ ಮಾರಣಾಂತಿಕ ಹಲ್ಲೆ

ಬೆಂಗಳೂರು: 'ಹೇ ಚೈಲ್ಡ್' ಎಂದು ಕರೆದಿದ್ದಕ್ಕೆ ವ್ಯಕ್ತಿ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ಅಗ್ರಹಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ತಡವಾಗಿ ಬೆಳಕಿಗೆ ಬಂದಿದೆ. ಶೇಖರ್ ರೆಡ್ಡಿ ಪುತ್ರ ಅಕ್ಷಯ್ ರೆಡ್ಡಿಯನ್ನು 'ಹೇ ಚೈಲ್ಡ್' ಎಂದು ಕರೆದಿದ್ದಕ್ಕೆ ರವಿ ಎಂಬಾತನ ಮೇಲೆ 20ಕ್ಕೂ ಹೆಚ್ಚು ಮಂದಿ ಹಲ್ಲೆ ನಡೆಸಿದ್ದಾರೆ. ಗಂಭೀರವಾಗಿ ಗಾಯಗೊಂಡಿರುವ ರವಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಮಧ್ಯೆ ಶೇಖರ್ ರೆಡ್ಡಿ ಕುಟುಂಬಸ್ಥರು ದೂರು ದಾಖಲಿಸದಂತೆ ರವಿಗೆ ಬೆದರಿಕೆ ಹಾಕುತ್ತಿದ್ದಾರೆ. ಮತ್ತೊಂದೆಡೆ ರವಿ ದೂರು ನೀಡಲು ಮುಂದಾದರೆ ಪರಪ್ಪನ ಅಗ್ರಹಾರ ಪೊಲೀಸರು ಆತನ ವಿರುದ್ಧವೇ ಪ್ರಕರಣ ದಾಖಲಿಸಿಕೊಂಡಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಈ ಕುರಿತಂತೆ ರವಿ, ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಹಾಗೂ ಸಿಬ್ಬಂದಿ ವಿರುದ್ಧ ನಗರ ಪೊಲೀಸ್ ಆಯುಕ್ತರು ಹಾಗೂ ಮಾನವ ಹಕ್ಕು ಆಯೋಗಕ್ಕೆ ದೂರು ನೀಡಿದ್ದಾರೆ. ಹೀಗಾಗಿ ಪರಪ್ಪನ ಅಗ್ರಹಾರ ಪೊಲೀಸರು ಪ್ರತಿದೂರು ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

ಟೆಕ್ಕಿ ಮೇಲೆ ಆಟೋ ಚಾಲಕನ ದರ್ಪ

ಬೆಂಗಳೂರು: ರ‍್ಯಾಪಿಡೋ ಬೈಕ್‌ಗೆ ಕಾಯುತ್ತಿದ್ದ ಟೆಕ್ಕಿ ಮೇಲೆ ಆಟೋ ಚಾಲಕನೊಬ್ಬ ಆಟೋ ಹರಿಸಲು ಯತ್ನಿಸಿರುವ ಘಟನೆ ನಗರದ ಎಚ್‌ಎಸ್‌ಆರ್ ಲೇಔಟ್ ಸೆಕ್ಟರ್ 1ರಲ್ಲಿ ನಡೆದಿದೆ. ಗುರುವಾರ ಬೆಳಗಿನ ಜಾವ 3.30ರ ಸುಮಾರಿಗೆ ರ‍್ಯಾಪಿಡೋ ಬೈಕ್ ಬುಕ್ ಮಾಡಿ ಟೆಕ್ಕಿಯೊಬ್ಬರು ಕಾಯುತ್ತಿದ್ದರು. ಈ ವೇಳೆ ರಸ್ತೆಯಲ್ಲಿ ನಿಂತಿದ್ದ ಒಂದು ಆಟೋದವನು, ನೋಡ ನೋಡುತ್ತಿದ್ದಂತೆ ಟೆಕ್ಕಿ ಮೇಲೆ ನುಗ್ಗಿಸಿದ್ದಾನೆ. ಆಟೋ ಡಿಕ್ಕಿ ರಭಸಕ್ಕೆ ಟೆಕ್ಕಿ ರಸ್ತೆ ಬದಿಗೆ ಬಿದ್ದಿದ್ದಾರೆ. ಆಟೋ ಚಾಲಕನ ಈ ದುಂಡಾವರ್ತನೆ ಸಿಸಿ ಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಈ ಬಗ್ಗೆ ಎಚ್‌ಎಸ್‌ಆರ್ ಲೇಔಟ್ ಪೊಲೀಸರಿಗೆ ದೂರು ನೀಡಲಾಗಿದೆ.

ಸಭೆ/ಸಮಾರಂಭ

ಕವಿ, ಕಾವ್ಯ, ಕವಿತೆಗಳ ಓದುವಿಕೆಯ ಮಾಲಿಕೆ-1
ಮುಖ್ಯ ಅತಿಥಿ: ಸುಜಾತ ಎಚ್.ಆರ್, ಬಿ.ಎಸ್. ಅರುಣಕುಮಾರ್
ಸ್ಥಳ: ಡಾ.ಎಚ್.ಎನ್. ಮಲ್ಟಿಮೀಡಿಯಾ ಹಾಲ್, ನ್ಯಾಷನಲ್ ಕಾಲೇಜು, ಬಸವನಗುಡಿ
ಸಮಯ: ಮಧ್ಯಾಹ್ನ 2.00 ಗಂಟೆ

ಮುದ್ರಣ ಮತ್ತು ಪ್ಯಾಕೇಜಿಂಗ್ ವಸ್ತು ಪ್ರದರ್ಶನ
ಮುಖ್ಯ ಅತಿಥಿ: ಡಾ.ರಾಮಲಿಂಗ ರೆಡ್ಡಿ, ಸಿ.ಆರ್. ಜನಾರ್ಧನ್
ಸ್ಥಳ: ತ್ರಿಪುರ ವಾಸಿನಿ ಅರಮನೆ ಮೈದಾನ, ಬೆಂಗಳೂರು
ಸಮಯ: ಬೆಳಗ್ಗೆ 11.00 ಗಂಟೆ

ಪ್ರತಿ ಶುಕ್ರವಾರ
ಸಿನಿಮಾಸ್
ಜಾಸ್ತಿ ಮಾಸ್ ಜಾಸ್ತಿ ಕ್ಲಾಸ್

ಸಂಸ್ಕೃತಿ ಕಲಿಕೆಗೆ ಮಕ್ಕಳ ನಿರಾಸಕ್ತಿ

ವಿಶ್ವವಾಣಿ ಕ್ಲಬ್‌ಹೌಸ್‌ನಲ್ಲಿ ಚಿತ್ರಕಲಾವಿದೆ ಗಂಗಾ ಹೆಗಡೆ ಕಾನ್ಸೂರ್

ವಿಶ್ವವಾಣಿ ಕ್ಲಬ್‌ಹೌಸ್ ಬೆಂಗಳೂರು

ಇತ್ತೀಚೆಗೆ ಹವ್ಯಕರ ಸಂಸ್ಕೃತಿ ಮತ್ತು ಸಂಪ್ರದಾಯ ನಶಿಸುತ್ತಿದೆ. ಈಗಿನ ಮಕ್ಕಳಿಗೆ ಸಂಪ್ರದಾಯದ ಪರಿಚಯವಿಲ್ಲ. ವಿದ್ಯಾಭ್ಯಾಸದ ಹೆಸರಿನಲ್ಲಿ ಬೇರೆ ಊರುಗಳಿಗೆ ಹೋಗಿ, ಓದಿನಲ್ಲಿ ಮುಂದೆ ಸಾಗುತ್ತಿದ್ದಾರೆ. ಆದರೆ, ಹವ್ಯಕರ ಮಕ್ಕಳು ಸಂಸ್ಕೃತಿ ಕಲಿಕೆಯಲ್ಲಿ ಹಿಂದೆ ಉಳಿದಿದ್ದಾರೆ ಎಂದು ಚಿತ್ರಕಲಾವಿದೆ ಗಂಗಾ ಹೆಗಡೆ ಕಾನ್ಸೂರ್ ಹೇಳಿದ್ದಾರೆ.



ವಿಶ್ವವಾಣಿ ಕ್ಲಬ್‌ಹೌಸ್‌ನಲ್ಲಿ 'ಹವ್ಯಕರ ಹಬ್ಬ, ಹಾಡುಗಳು' ಎನ್ನುವ ವಿಷಯದ ಕುರಿತು ಮಾತನಾಡಿ, ಈಗಿನ ಮಕ್ಕಳಿಗೆ ಜನಪದ ಹಾಡುಗಳ ಬಗ್ಗೆ ಆಸಕ್ತಿ ಇಲ್ಲ. ಹವ್ಯಕರ ಜನಪದ ಹಾಡುಗಳ ಪುಸ್ತಕಗಳು ಹೊರಬಂದ ಮೇಲೆ ಹಾಡಿನ ಕಲಿಕೆಯಲ್ಲಿ ಆಸಕ್ತಿ ತೋರುತ್ತಿದ್ದಾರೆ ಎಂದು ತಿಳಿಸಿದರು.

ಹವ್ಯಕರು ಉನ್ನತ ಸಂಪ್ರದಾಯ ಹೊಂದಿರುವ ಬ್ರಾಹ್ಮಣ ಸಮುದಾಯದ ಒಂದು ಉಪಪಂಗಡ. ಹಾಡುಗಳಿಂದ ದೇವರನ್ನು ಆರಾಧನೆ ಮಾಡುವ ಸಂಸ್ಕೃತಿ ಹವ್ಯಕರಲ್ಲಿದೆ. ಬನವಾಸಿ ಕದಂಬ ಅರಸರು 104ನೇ ಶತಮಾನದಲ್ಲಿ ಹವ್ಯಕರನ್ನು ಉತ್ತರ ಭಾರತದಿಂದ ದಕ್ಷಿಣದ ಕಡೆಗೆ ದೇವಾರ್ಚನೆಗೆಂದು ಕರೆಸಿದರು. ಒಟ್ಟಾರೆ ಹವ್ಯಕರು ಉತ್ತಮ ಸಂಸ್ಕೃತಿ ಮತ್ತು ಸಂಪ್ರದಾಯ ಉಳ್ಳವರೆಂದು ಇತಿಹಾಸ ಹೇಳುತ್ತದೆ. ಪ್ರತಿಯೊಂದು ಹಬ್ಬ ಮತ್ತು ಶುಭದಿನಗಳಲ್ಲಿ ವಿವಿಧ ಬಗೆಯ ಆಹಾರ ತಯಾರಿಸಿ ನೈವೇದ್ಯವಾಗಿ ಸಮರ್ಪಿಸುವ ವಿಧಿವಿಧಾನವಿದೆ. ನಮ್ಮ ಕಾಲದಲ್ಲಿ ಬೆಳಗಿನ ಜಾವದಲ್ಲಿ ಅಜ್ಜಿ ಮತ್ತು ತಾಯಂದಿರ ಜನಪದ ಹಾಡುಗಳಿಂದ ದಿನ ಪ್ರಾರಂಭವಾಗುತ್ತಿತ್ತು ಎಂದರು.

ಗರುಡ ಪಂಚಮಿ ವ್ರತದಿಂದ ದಕ್ಕುವ ಮಾಂಗಲ್ಯಭಾಗ್ಯ

ಶ್ರಾವಣ ಮಾಸದಲ್ಲಿ ನಾಗರ ಪಂಚಮಿಯನ್ನು ವಿಶೇಷವಾಗಿ ಆಚರಣೆ ಮಾಡುತ್ತೇವೆ. ಅಂದು ವಿಶೇಷ ಪೂಜೆ ಜತೆಗೆ ವಿಭಿನ್ನ ನೈವೇದ್ಯ ಮಾಡಿ ನಾಗದೇವತೆಗೆ ಸರ್ಮಪಣೆ ಮಾಡುತ್ತೇವೆ. ಜನಪದ ಹಾಡಿನಲ್ಲಿ ಹಬ್ಬವನ್ನು ಆಚರಿಸುವ ವಿಧಾನವನ್ನು ಹೇಗೆ ಆಳವಡಿಸಿದ್ದಾರೆ ಎಂದು ಹೇಳಿದ ಗಂಗಾ ಹೆಗಡೆ ಕಾನ್ಸೂರ್ ಅದರ ಕುರಿತಾದ ಕಥೆಯೊಂದನ್ನು ವಿವರಿಸಿದರು. ಬ್ರಾಹ್ಮಣ ಹೆಣ್ಣುಮಗಳು ನಾಗಪೂಜೆ ಮಾಡಲು ನಿಶ್ಚಯ ಮಾಡುತ್ತಾಳೆ. ಕಾಡಿಗೆ ಹೋಗಿ ಹೂ ತರಲು ಅಣ್ಣನಿಗೆ ಸೂಚಿಸುತ್ತಾಳೆ. ಕಾಡಿನಿಂದ ಹೂ ತರುವ ಸಂದರ್ಭದಲ್ಲಿ ಆತ ಹಾವಿನ ಕಡಿತಕ್ಕೆ ತುತ್ತಾಗಿ ಪ್ರಾಣ ಕಳೆದುಕೊಳ್ಳುವ ಸ್ಥಿತಿಯಲ್ಲಿ ಇರುತ್ತಾನೆ. ಇದನ್ನು ಲೆಕ್ಕಿಸದೆ ಆಕೆ ವ್ರತವನ್ನು ಮುಂದುವರಿಸುತ್ತಾಳೆ. ನಂತರ ದೇವರ ಅನುಗ್ರಹದಿಂದ ಅಣ್ಣ ಬದುಕಿ ಉಳಿಯುತ್ತಾನೆ. ಇದು ಗರುಡ ಪಂಚಮಿ ವ್ರತದ ಹಿನ್ನೆಲೆಯಾಗಿದೆ. ಈ ವ್ರತ ಮಾಡುವುರಿಂದ ಮಹಿಳೆಯರಿಗೆ ಮಾಂಗಲ್ಯ ಮತ್ತು ಇತರೆ ಭಾಗ್ಯಗಳ ಸಿದ್ಧಿಯಾಗುತ್ತದೆ ಎನ್ನುವ ನಂಬಿಕೆಯಿದೆ ಎಂದು ವಿವರಿಸಿದರು.

'ಹವ್ಯಕರ ಸಂಪ್ರದಾಯ ಮತ್ತು ಸಂಸ್ಕೃತಿಯಲ್ಲಿ ಹೆಣ್ಣುಮಕ್ಕಳಿಗೆ ಪ್ರತ್ಯೇಕ ಸ್ಥಾನಮಾನ ನೀಡಿದ್ದೇವೆ. ಪ್ರತಿ ಹಬ್ಬಗಳನ್ನು ಅವರೊಂದಿಗೆ ಆಚರಿಸುವ ಸಂಪ್ರದಾಯ ಮತ್ತು ಸಂಸ್ಕೃತಿಯಿದೆ. ಕೆಲವು ಹಬ್ಬಗಳಿಗೆ ಅವರ ಹಾಜರಿ ಇರಲೇಬೇಕು'.

-ಗಂಗಾ ಹೆಗಡೆ ಕಾನ್ಸೂರ್ ಚಿತ್ರಕಲಾವಿದೆ

ಹವ್ಯಕರು ಪ್ರಥಮ ಏಕಾದಶಿ ಹಬ್ಬವನ್ನು ಸಿದ್ಧಿವಿನಾಯಕನ ಸ್ಮರಣೆಯಿಂದ ಆರಂಭ ಮಾಡುತ್ತಾರೆ. 'ಶ್ರೀ ಪ್ರೇಮದಿ ಪೂಜಿತನಯ್ಯ' ಎನ್ನುವ ಹಾಡನ್ನು ಹಾಡುತ್ತಾ ಪೂಜೆ ಮುಂದುವರಿಸುತ್ತಾರೆ. ನೈವೇದ್ಯ ಸರ್ಮಪಣೆ, ಆರತಿ, ಪುಷ್ಪಾರ್ಚನೆ ಸಮಯದಲ್ಲಿ ವಿವಿಧ ಹಾಡುಗಳನ್ನು ಹಾಡಿ ಪೂಜೆ ಮಾಡುತ್ತೇವೆ. ಹಾಗೆಯೇ ಆಷಾಢ ಅಮಾವಾಸ್ಯೆ ಸಮಯದಲ್ಲಿ ಸೀತೆಯನ್ನು ರಾವಣ ಅಪಹರಿಸಿದ, ಶ್ರೀರಾಮನು ಕಪಿ ಸೇನೆಯೊಂದಿಗೆ ಲಂಕೆಗೆ ಹೋಗಿ ರಾವಣನ್ನು ಸಂಹರಿಸಿದ, ಹಾಗೆಯೇ ರಾಮೇಶ್ವರಂನಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪನೆ ಮಾಡಿದ ಎನ್ನುವ ಕಥೆಗಳಿವೆ. ಆಷಾಢ ಅಮಾವಾಸ್ಯೆಯಲ್ಲಿ ಶ್ರೀರಾಮನ ಕುರಿತು ಎರಡು ಹಾಡು ಪ್ರತ್ಯೇಕವಾಗಿ ಹಾಡಿ, ಸ್ಮರಣೆ ಮಾಡಿಕೊಳ್ಳುತ್ತೇವೆ. ಜತೆಗೆ ಭೀಮನ ಅಮಾವಾಸ್ಯೆ/ಅಳಿಯನ ಅಮಾವಾಸ್ಯೆಯನ್ನು ವಿಶೇಷವಾಗಿ ಆಚರಣೆ ಮಾಡುತ್ತೇವೆ ಎಂದು ವಿವರಿಸಿದರು. ಅಲ್ಲದೆ, ಹಾಡುಗಳನ್ನು ಹೇಳಿ ಅದರ ಅರ್ಥ ವಿವರಿಸಿದರು.

ಕುರಿ ಮಾಂಸದಂಗಡಿಯಲ್ಲಿ ದನದ